# ಬಾಡಿಗೆ ತಂದೆ!

## ಪಾತ್ರದೊಳಗಿನ ಪಾತ್ರ



### ಶಿವಮೊಗ್ಗ ಭಾಸ್ಕರ್
ಕಲರ್ಸ್ ಕನ್ನಡದ 'ಗೀತಾ' ನಟ

◆ **'ಗೀತಾ'ದ ಪಾತ್ರ ಏಕೆ ಇಷ್ಟ ಆಯಿತು?**

ಗೀತಾದಲ್ಲಿ ನಾಯಕನಿಗೆ ನಕಲಿ ಅಪ್ಪನಾಗಿ ನಾನು ಕಾಣಿಸಿಕೊಳ್ಳುತ್ತೇನೆ. ಕಥೆ ಒಂದು ರೀತಿ ರೋಚಕ. ಅವನ ತಂದೆ–ತಾಯಿ ದೂರದೂರಲ್ಲಿ ಇರುತ್ತಾರೆ. ಅವನಿಗೆ ದೊಡ್ಡ ಕುಟುಂಬದಲ್ಲಿ ಮದುವೆ ಆಗುವ ಅಪೇಕ್ಷೆ. ಆ ಹುಡುಗಿಯನ್ನು ನೋಡಲು ನಮ್ಮನ್ನೇ ಬಾಡಿಗೆ ಪೋಷಕರನ್ನಾಗಿ ಮಾಡಿಕೊಳ್ಳುತ್ತಾನೆ. ನಮ್ಮದು ಇಸ್ತ್ರಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದ ಬಡಕುಟುಂಬ. ಇಸ್ತ್ರಿಗೆ ಬಂದಿದ್ದ ಒಳ್ಳೆಯ ಗುಣಮಟ್ಟದ ಬಟ್ಟೆಯನ್ನೇ ನಮಗೆ ತೊಡಿಸಿ ದೊಡ್ಡ ಶ್ರೀಮಂತರಂತೆ ನಟಿಸಲು ಹೇಳುತ್ತಾನೆ. ಒಂದು ಹಂತದಲ್ಲಿ ಗೀತಾಳಿಗೆ ಈ ಸತ್ಯ ಗೊತ್ತಾಗುತ್ತದೆ. ಅದುವೇ ಈ ಕಥೆಯ ಕುತೂಹಲದ ಹೂರಣವಾಗಿತ್ತು.

◆ **ನಟನೆಯ ಸವಾಲಿನ ಬದುಕು ಆಯ್ಕೆ ಮಾಡಿಕೊಂಡಿದ್ದು ಏಕೆ?**

ಈ ಕ್ಷೇತ್ರಕ್ಕೆ ಬಂದು 25 ವರ್ಷಗಳು ಆದವು. ನೂರಕ್ಕೂ ಹೆಚ್ಚು ಧಾರಾವಾಹಿ, ಐವತ್ತು ಸಿನಿಮಾಗಳಲ್ಲಿ ನಟಿಸಿದ್ದೇನೆ. ಇತ್ತೀಚೆಗೆ 'ಕೌಸಲ್ಯ ಸುಪ್ರಜಾ ರಾಮ'ದಲ್ಲಿ ಚಿಕ್ಕ ಪಾತ್ರವನ್ನು ಮಾಡಿದ್ದೆ. ಈಗ 'ಯುವ'ದಲ್ಲಿ ನಟಿಸುತ್ತಿದ್ದೇನೆ. ನಮ್ಮದೇ 'ದೇವದೂತ' ಸಿನಿಮಾ ಮಾಡಿದ್ದೇವೆ. ಒಂದೆರಡು ತಿಂಗಳಲ್ಲಿ ಬಿಡುಗಡೆ ಆಗುತ್ತದೆ. ಈ ಕ್ಷೇತ್ರದಲ್ಲಿ ರಿಸ್ಕ್ ತೆಗೆದುಕೊಳ್ಳಲೇಬೇಕು. ನಾವು ಸವಾಲನ್ನು ತೆಗೆದುಕೊಳ್ಳದೆ ಹೋದರೆ ಯಾವ ಸಾಧನೆಯನ್ನೂ ಮಾಡಲು ಆಗುವುದಿಲ್ಲ. ಕೆಲ ಕಲಾವಿದರು ರಂಗಭೂಮಿಗೆ ತಮ್ಮನ್ನು ಅರ್ಪಿಸಿಕೊಂಡಿರುತ್ತಾರೆ. ಅವರಿಗೆ ಅಲ್ಲಿ ಹಣ ಬರಲ್ಲ ಎಂದು ಗೊತ್ತು. ಪ್ರೇಕ್ಷಕರ ಚಪ್ಪಾಳೆಯಲ್ಲೇ ಖುಷಿಪಡುತ್ತಾ ಬಡತನದಲ್ಲೇ ಬದುಕನ್ನು ನೂಕುತ್ತಾರೆ. ತೆರೆಯಲ್ಲಿ ಕಾಣಿಸುವ ಕಲಾವಿದರ ಜೀವನವೂ ಅಷ್ಟೇ. ಇಲ್ಲಿ ಕೆಲವರಿಗೆ ಮಾತ್ರ ದೊಡ್ಡ ಯಶಸ್ಸು ಸಿಗುತ್ತದೆ. ಅದಕ್ಕಿಂತ ದೊಡ್ಡಪ್ರಮಾಣದಲ್ಲಿ ಆರಕ್ಕೂ ಏರದೆ ಮೂರಕ್ಕೂ ಇಳಿಯದೆ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಬದುಕನ್ನು ಸಾಗಿಸುವ ಮಂದಿ ಇರುತ್ತಾರೆ. ಅದರಲ್ಲೇ ಅವರಿಗೆ ಖುಷಿ ಸಿಗುತ್ತದೆ. ಆ ವರ್ಗದಲ್ಲಿ ನಾನೂ ಇದ್ದೇನೆ. ಬಿಕಾಂ, ಎಲ್‌ಎಲ್‌ಬಿ ಓದಿದ್ದೇನೆ. ನನ್ನ ಪ್ರೌಢಶಾಲೆಯ ದಿನಗಳಲ್ಲಿಯೇ ಶಿವಮೊಗ್ಗದಲ್ಲಿ 'ಸಹ್ಯಾದ್ರಿ ರಂಗ ತರಂಗ' ತಂಡದಲ್ಲಿ ತೊಡಗಿಕೊಂಡೆ. ಅಲ್ಲಿ ಕಲಿಯುತ್ತಾ ಬೆಳೆದ ನನಗೆ ಇದೇ ಕ್ಷೇತ್ರದಲ್ಲಿ ಏನಾದರೂ ಮಾಡಬೇಕು ಎಂಬ ತುಡಿತ ವೃತ್ತಿಪರ ನಟನನ್ನಾಗಿ ಮಾಡಿತು.

◆ **ಬೆಂಗಳೂರಿಗೆ ಬಂದಿದ್ದು ಹೇಗೆ? ಇಲ್ಲಿ ಜೀವನ ಆಗ ಹೇಗಿತ್ತು?**

ಬೆಂಗಳೂರು ಎಂಬ ಮಾಯಾನಗರದ ಊರು–ಕೇರಿಗೆ ಹೊಂದಿಕೊಳ್ಳಲು ಒಂದಿಷ್ಟು ಕಾಲ ಹಿಡಿಯಿತು. ಬೇರೆ ಊರಿಂದ ಬಂದಿದ್ದರಿಂದ ನನ್ನನ್ನು ನಾನು ಪರಿಚಯಿಸಿಕೊಳ್ಳುವುದು ಶ್ರಮದಾಯಕವಾಗಿತ್ತು. ಇಲ್ಲಿ ಅವಕಾಶವನ್ನು ಹಿಡಿಯುವುದು ಸುಲಭದ ಕೆಲಸ ಆಗಿರಲ್ಲ. ಸಿಕ್ಕ ಅವಕಾಶವನ್ನು ಬಳಸುತ್ತಾ, ಮತ್ತೆ ಹುಡುಕುತ್ತಾ ಸಾಗಿದೆ. ಉದಯ ಟೀವಿಯಲ್ಲಿ ಕಾರ್ಯಕಾರಿ ನಿರ್ಮಾಪಕ ಕೆಲಸವನ್ನು ಹಿಡಿದು ಬೆಂಗಳೂರಿಗೆ ಬಂದಿದ್ದೆ. ಅಲ್ಲಿ ನಿರ್ದೇಶನ ಸೇರಿದಂತೆ ಕಾರ್ಯಕ್ರಮ ರೂಪಿಸುವ ಜವಾಬ್ದಾರಿ ಇತ್ತು. ಅದು ನನ್ನ ಕನಸಿನ ಬದುಕಿಗೆ ನೆರವು ಆದೀತು ಎಂದೇ ಬಂದೆ. ಸ್ಕ್ರಿಪ್ಟ್ ಸೇರಿದಂತೆ ಬಹುಮುಖ ಕೆಲಸ, ಅದಕ್ಕೆ ಪೂರಕ ಸಹಕಾರವನ್ನು ವಾಹಿನಿ ನೀಡುತ್ತಿತ್ತು.

ನಾನು ಓದಿದ್ದಕ್ಕೂ ಮಾಡುವ ಕೆಲಸಕ್ಕೂ ಸಂಬಂಧ ಇರಲಿಲ್ಲ. ಆಸಕ್ತಿಯಿಂದ ಕೆಲಸ ಮಾಡುತ್ತಾ ಒಂದು ದಿನ ಹೊರಬರಬೇಕಾಯಿತು. ಈಗ ಸಿನಿಮಾ ಮತ್ತು ಕಿರುತೆರೆಗೆ ಪೂರ್ಣ ಮೀಸಲಾಗಿದ್ದೇನೆ. ಸರ್ಕಾರದ ಕಾರ್ಯಕ್ರಮಗಳ ನಿರೂಪಣೆಯನ್ನೂ ಮಾಡುತ್ತೇನೆ. ಚಂದನದ ವಾರ್ತಾವಾಚಕನಾಗಿ ಇವತ್ತಿಗೂ ಕೆಲಸ ಮಾಡುತ್ತಿದ್ದೇನೆ. ಬೇರೆ ಬೇರೆ ಕಾರ್ಯಕ್ರಮಗಳ ನಿಮಿತ್ತ ಸುತ್ತಾಡುತ್ತೇನೆ. ಬೇರೆ ಬೇರೆ ಭಾಷೆಗೆ ಡಬ್ಬಿಂಗ್ ಮಾಡುವ ಅವಕಾಶ ಬೆಂಗಳೂರಿನಲ್ಲಿ ಸಿಗುತ್ತಿದೆ. ಡಬ್ಬಿಂಗ್ ಸ್ಟುಡಿಯೊದಲ್ಲಿ ನಮ್ಮ ವಾಯ್ಸ್ ಸ್ಯಾಂಪಲ್ ಇರುತ್ತದೆ. ನಮ್ಮ ಧ್ವನಿ ಸೂಕ್ತ ಅನ್ನಿಸಿದರೆ ನಮಗೆ ಸ್ಕ್ರಿಪ್ಟ್ ಕೊಟ್ಟು ಡಬ್ಬಿಂಗ್ ಮಾಡಿಸುತ್ತಾರೆ. ಒಂದೆರಡು ಭಾಷೆಗೆ ಮಾತ್ರ ಡಬ್ಬಿಂಗ್ ಮಾಡುವುದಿಲ್ಲ. ನನಗೆ ನಟಿಸುವುದು ಅಚ್ಚುಮೆಚ್ಚಿನ ಕೆಲಸ. ಕಷ್ಟವಾದರೂ ಪರ್ವಾಗಿಲ್ಲ ಎಂದು ಅದನ್ನೇ ವೃತ್ತಿಯಾಗಿ ತೆಗೆದುಕೊಂಡಿದ್ದೇನೆ.

◆ **ಮರೆಯಲಾರದ ಪ್ರಸಂಗಗಳನ್ನು ಹೇಳಬಹುದಾ?**

ಅಂತಹ ಹಲವು ಪ್ರಸಂಗಗಳು ನಡೆದಿರುತ್ತವೆ. ತಕ್ಷಣ ನೆನಪಿಗೆ ಬರುತ್ತಿಲ್ಲ. ಉದಯ ಟೀವಿಯಲ್ಲಿ ದೊಡ್ಡ ದೊಡ್ಡ ಕಲಾವಿದರನ್ನು ಹತ್ತಿರದಿಂದ ನೋಡಿದ್ದೇನೆ. ಅವರ ಜೊತೆ ಮಾತನಾಡುವ ಅವಕಾಶ ಸಿಕ್ಕಿದೆ. ಕಾರ್ಯಕ್ರಮಗಳಲ್ಲಿ ಒಡನಾಟ ಮರೆಯಲು ಸಾಧ್ಯವಿಲ್ಲ. ದೂರದರ್ಶನದಲ್ಲಿ 'ಶುಭೋದಯ ಕರ್ನಾಟಕ' ಕಾರ್ಯಕ್ರಮವನ್ನು ನಿರೂಪಣೆ ಮಾಡುತ್ತಿದ್ದೆ. ರಾಜ್‌ಕುಮಾರ್ ಅವರ ವೈದ್ಯ ಡಾ. ರಮಣ್‌ರಾವ್ ಅವರ ಸಂದರ್ಶನ ಈಗಲೂ ಸ್ಮರಣೀಯ. ದೊಡ್ಡ ದೊಡ್ಡ ಸಾಹಿತಿಗಳ ಜೊತೆ ಕುಳಿತು ಎರಡು ಗಂಟೆ ಮಾತನಾಡಿದ್ದು ಮರೆಯದ ನೆನಪು. ಅವರಿಂದ ತುಂಬ ಪ್ರೇರಣೆ ನನಗೆ ಸಿಕ್ಕಿದೆ. ಅಪ್ಪು ಅವರ 'ರಾಜಕುಮಾರ' ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿದೆ. ಚಿಕ್ಕ ಪಾತ್ರ ಆದರೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. 'ಯುವರತ್ನ'ದಲ್ಲಿ ಪ್ರಕಾಶ್ ರಾಜ್ ಅವರ ಜೊತೆ ನಟಿಸಿದೆ. ದಿಗ್ಗಜ ನಟರ ಜೊತೆ ಸಹನಟನಾಗಿದ್ದು ತುಂಬ ಖುಷಿ ಕೊಡುತ್ತದೆ. ಈ ಖುಷಿ ವಾಸ್ತವದ ನೋವನ್ನು ಮರೆಯುವಂತೆ ಮಾಡಿದೆ.

■ ರಾಘವೇಂದ್ರ ಕೆ.